## ಸಂಪಾದಕೀಯ

ಸಮಸ್ತ ಜೀವ ಸಂಕುಲದಲ್ಲಿ ಮನುಷ್ಯ ಒಬ್ಬ ವಿವೇಚನಾಶೀಲ ಹಾಗೂ ವೈಚಾರಿಕ ಜೀವಿಯಾಗಿದ್ದು, ಇತರೆ ಜೀವಿಗಳಿಗಿಂತ ಭಿನ್ನವಾದ ಸ್ಥಾನವನ್ನು ಹೊಂದಿದ್ದಾನೆ. ಶಿಕ್ಷಣ ಮನುಷ್ಯನ ಜೀವನದ ಏಳಿಗೆಯಲ್ಲಿ, ಆತನನ್ನು ವಿಚಾರಶೀಲ ವ್ಯಕ್ತಿಯಾಗಿ ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತ ಬಂದಿದೆ ಎಂಬುದು ಸರ್ವವೇದ್ಯ.

ಶಿಕ್ಷಣವೆಂದರೆ "ಮಾನವೀಯತೆಯ ವಿಕಾಸ, ಮನುಷ್ಯರಲ್ಲಿ ಪರಿಪೂರ್ಣತೆಯನ್ನು ಹಿಗ್ಗಿಸುವುದೇ ಶಿಕ್ಷಣ" ಎಂಬ ಸ್ವಾಮಿ ವಿವೇಕಾನಂದರ ವಿಚಾರಧಾರೆಯಂತೆ ಶಿಕ್ಷಣ ಮನುಷ್ಯನ ಆಳದಲ್ಲಿ ಅಡಗಿರುವ ಪ್ರತಿಭೆ, ವಿಚಾರ ಶೀಲತೆಯನ್ನು ಹೊರ ತರುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ.

ಈ ಹಿನ್ನೆಲೆಯಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರು "ಶಿಕ್ಷಣವೇ ಶಕ್ತಿ" ಎಂಬ ವಿಚಾರವನ್ನು ವ್ಯಕ್ತಪಡಿಸಿರುವುದನ್ನು ಗಮನಿಸಬಹುದಾಗಿದೆ. ಪ್ರಾಚೀನ ಗುರುಕುಲ ಪದ್ಧತಿಯಿಂದ ಹಿಡಿದು ಆಧುನಿಕ ಅಂತರ್ಜಾಲ ಆಧಾರಿತ ಶಿಕ್ಷಣದವರೆಗೆ ನಮ್ಮ ಶಿಕ್ಷಣ ವ್ಯವಸ್ಥೆ ಕಾಲ ಕಾಲಕ್ಕೆ ಹೊಸ ಹೊಸ ವಿಚಾರಧಾರೆಗಳೊಂದಿಗೆ, ಆಲೋಚನಾ ವಿಧಾನಗಳೊಂದಿಗೆ, ಆಧುನಿಕ ವಿಜ್ಞಾನ, ತಂತ್ರಜ್ಞಾನದ ಪ್ರಭಾವದಿಂದಾಗಿ ಪರಿಷ್ಕರಣೆಯಾಗುತ್ತಾ ಬಂದಿರುವುದು ನಮಗೆಲ್ಲರಿಗೂ ತಿಳಿದಿರುವ ಸಂಗತಿ.

> ಹೊಸ ಚಿಗುರು ಹಳೆ ಬೇರು
> ಕೂಡಿರಲು ಮರ ಸೊಬಗು
> ಹೊಸಯುಕ್ತಿ ಹಳೆ ತತ್ವದೊಡಗೂಡಿ ಧರ್ಮ
> ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ

ಜಸವು ಜನ ಜೀವನಕ್ಕೆ – ಮಂಕುತಿಮ್ಮ ಎಂಬ ಕಗ್ಗದಲ್ಲಿ ಡಿ.ವಿ ಗುಂಡಪ್ಪನವರು ಸಮಾಜದಲ್ಲಿ ಆಗುವ ಸಹಜ ಬದಲಾವಣೆಗಳ ಸೂಚನೆಯನ್ನು ನೀಡುತ್ತ, ಹಳೆಯ ಪದ್ಧತಿ ಹಾಗೂ ಹೊಸ ಆಲೋಚನೆಗಳ ಸಮ್ಮಿಲನದ ಮೂಲಕ ಸಮಾಜದಲ್ಲಿ ಸುಖ ಶಾಂತಿ ನೆಲೆಸಲು ಸಾಧ್ಯವಾಗುತ್ತದೆ ಎಂದು ವ್ಯಕ್ತಪಡಿಸಿರುವ ವಿಚಾರಧಾರೆ ಗಮನಾರ್ಹವಾದುದು. ಈ ನಿಟ್ಟಿನಲ್ಲಿ ಶಿಕ್ಷಣ ಕ್ಷೇತ್ರವೂ ಕೂಡ ಕಾಲದ ಅಗತ್ಯಗಳಿಗೆ ತಕ್ಕಂತೆ ಬದಲಾವಣೆಯಾಗುತ್ತ ಸಾಗಿದೆ. ಮೊದಲು ಕೇವಲ ಸೀಮಿತ ಸಂಸ್ಥೆಗಳ ಆಡಳಿತ ವರ್ಗದ ಸಭೆಗಳಿಗೆ ಸೀಮಿತವಾಗಿದ್ದ, ಅಂತರ್ಜಾಲ ಆಧಾರಿತ ವೇದಿಕೆಗಳು ಕೋವಿಡ್ ಕಾಲ ಹಾಗೂ ನಂತರದ ಕಾಲಘಟ್ಟದಲ್ಲಿ ವ್ಯಾಪಕ ಪ್ರಾಮುಖ್ಯತೆಯನ್ನು ಪಡೆದು ಅಂತರ್ಜಾಲ ಆಧಾರಿತ ತರಗತಿಗಳು, ವಿಚಾರಗೋಷ್ಠಿಗಳು ಸೇರಿದಂತೆ ಅನೇಕ ಸಂದರ್ಭದಲ್ಲಿ ಬಳಕೆಯಾಗುತ್ತಿವೆ. ಈ ನೆಲೆಯಲ್ಲಿ ಇಂದು ನೇರ ತರಗತಿಗಳು ಹಾಗೂ ಅಂತರ್ಜಾಲ ತರಗತಿಗಳು ಕಾಲದ ಅಗತ್ಯತೆಗೆ ಅನುಗುಣವಾಗಿ ನಡೆಯುತ್ತಿರುವುದನ್ನು ಕಾಣಬಹುದಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ -೨೦೨೦ ಶಾಲಾ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಎರಡೂ ಸ್ತರಗಳಲ್ಲಿ ಗುಣಾತ್ಮಕವಾದ ಸುಧಾರಣೆಗಳನ್ನು ತರುವ ಉದ್ದೇಶದಿಂದ ವಿಜ್ಞಾನ- ತಂತ್ರಜ್ಞಾನ, ಭಾಷೆ, ಕಲೆ-ಸಾಹಿತ್ಯ, ಸಂಸ್ಕೃತಿ ಹೀಗೆ ಎಲ್ಲ ಕ್ಷೇತ್ರಗಳಿಗೂ ಪ್ರಾಧಾನ್ಯತೆ ದೊರಕಿಸಬೇಕೆಂಬ ನಿಟ್ಟಿನಲ್ಲಿ ಅನೇಕ ಅಂಶಗಳನ್ನು ಪ್ರಸ್ತಾಪಿಸಿದೆ. ಅದರಲ್ಲೂ ವಿಶೇಷವಾಗಿ ವಿವಿಧ ಜ್ಞಾನ ಶಿಸ್ತುಗಳ ಮಧ್ಯದ ಅಂತರವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಅಂತರ್‌ಶಿಸ್ತೀಯ ಹಾಗೂ ಬಹುಶಿಸ್ತೀಯ ಅಧ್ಯಯನ ಕ್ರಮಗಳನ್ನು ಹೆಚ್ಚು ವಿಸ್ತರಿಸಬೇಕೆಂಬ ವಿಷಯಕ್ಕೆ ಹೆಚ್ಚಿನ ಒತ್ತು ನೀಡಿದೆ. ಈ ನೆಲೆಯಲ್ಲಿ ಹೊಸ ಶಿಕ್ಷಣ ನೀತಿಯ ಅಡಿಯಲ್ಲಿ ಪಠ್ಯಗಳು ರೂಪಿತವಾಗಿ ಅದರ ಶಿಫಾರಸ್ಸುಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ

ಪ್ರಯತ್ನಗಳು ಸಾಗಿರುವುದು ಕಂಡು ಬರುತ್ತಿದೆ. ಕಲೆ ಮತ್ತು ವಿಜ್ಞಾನ ಕ್ಷೇತ್ರಗಳ ಅನುಸಂಧಾನ ಸಂಶೋಧನಾ ಅಧ್ಯಯನಗಳಲ್ಲಿ ಅಂತರ್ ಶಿಸ್ತೀಯತೆಗೆ ಹೆಚ್ಚು ಪೂರಕ ಕಾರ್ಯ ಮಾಡಬಲ್ಲುದೆಂಬ ವಿಚಾರದ ಹಿನ್ನೆಲೆಯಲ್ಲಿ ಪ್ರಸ್ತುತ ಶೈಕ್ಷಣಿಕ ವಲಯದಲ್ಲಿ ಪ್ರಯತ್ನಗಳು ಸಾಗಿವೆ. ಆದಾಗ್ಯೂ ಯಾವುದೇ ಹೊಸ ನೀತಿಯ ಅನುಷ್ಠಾನದ ಸಂದರ್ಭದಲ್ಲಿ ಕಂಡು ಬರುವ ಮಿತಿಗಳು ಇಲ್ಲಿಯೂ ಇಲ್ಲದಿಲ್ಲ. ಈ ನಿಟ್ಟಿನಲ್ಲಿ ಸಾಂಘಿಕ ಹಾಗೂ ರಚನಾತ್ಮಕ ಪ್ರಯತ್ನಗಳು ಶಿಕ್ಷಣ ಪದ್ಧತಿಯ ಪರಿಷ್ಕರಣೆಯ ಸಂದರ್ಭದಲ್ಲಿ ಅಗತ್ಯವಾಗಿವೆ.

ಅನುಕರ್ಷ ಬಹುಭಾಷಿಕ ತ್ರೈಮಾಸಿಕವು ತಮಗೆಲ್ಲ ತಿಳಿದಿರುವಂತೆ ಕಲೆ, ಸಾಹಿತ್ಯ, ಸಾಂಸ್ಕೃತಿಕ ಅಧ್ಯಯನ, ಸಮಾಜ ವಿಜ್ಞಾನದ ಕ್ಷೇತ್ರಗಳಷ್ಟೇ ಅಲ್ಲದೇ ವೈಜ್ಞಾನಿಕ ಬರಹಗಳಿಗೂ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

“ಅನುಕರ್ಷ” ನ ಪ್ರಸ್ತುತ ಸಂಚಿಕೆಯು ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಕನ್ನಡ ಸಾಹಿತ್ಯ ಕಾಲ ಘಟ್ಟಗಳಿಗೆ ಸಂಬಂಧಿಸಿದ ವೈವಿಧ್ಯಮಯ ಲೇಖನಗಳಿಂದ ಕೂಡಿದ್ದು, ಸಹೃದಯಿ ಸಾಹಿತ್ಯ ಬಂಧುಗಳಾದ ತಾವು ಓದಿ ಪ್ರತಿಕ್ರಿಯಿಸುವಿರೆಂಬ ಅದಮ್ಯ ವಿಶ್ವಾಸ ನಮ್ಮದಾಗಿದೆ.

ತಮ್ಮ ಸಲಹೆ- ಸೂಚನೆಗಳಿಗೆ ಸದಾ ಸ್ವಾಗತ.

ವಂದನೆಗಳೊಂದಿಗೆ, ಡಾ. ವಿವೇಕಾನಂದ ಸಜ್ಜನ